ಹೊತ್ತು ಕುಳಿತು ಅಂದಿನ ಸಮಾಚಾರ ಮಾತಾಡದೆ ಇರುತ್ತಿರಲಿಲ್ಲ. ಮೊದಮೊದಲು ಸಿಗರೇಟು ಸೇದಿದ್ದು, ಇದೇ ಮಾಡುಹೊಳೆಯ ಜೊಂಡು ಪೊದೆಯಲ್ಲಾಗಿತ್ತು. ದಿನ ಬೆಳಗಾದರೆ ಪಳನಿವೇಲು ಇಳಿಸುತ್ತಿದ್ದ ಪನಕಳ್ಳು ಕುಡಿದದ್ದು ಇದೇ ಇಲ್ಲೇ. ಆಮೇಲೆ ನಿಧಾನಕೆ ಬೆಲ್ಲ ಸಾರಾಯಿ ಕುಡಿದದ್ದು ಇಲ್ಲೇ, ಇದೇ ಜೊಂಡು ಪೊದೆಯೊಳಗೆ. "ಇದೆಲ್ಲ ನಮಗೆ ಹರಾಮ್ ಅಂತೆ; ಹಾಗಂತ ಉಮ್ಮ ಹೇಳುತ್ತಾಳೆ. ಆದರೆ ನನ್ನ ಪ್ರಕಾರ ಮತ್ತೊಬ್ಬನ ಬದುಕುವ ಹಕ್ಕನ್ನು ಕಸಿಯೋದರ ಹೊರತಾಗಿ ಬೇರೊಂದೇ ಒಂದು ಹರಾಮ್ ಕೆಲಸವೂ ಜಗತ್ತಿನಲ್ಲಿ ಇಲ್ಲ, ಏನಂತೀಯ?" ಇದು ಬಾಪುಟ್ಟಿ ಕುಡಿದಾಗ ಬೆಳೆಸುವ ತರ್ಕವಾಗಿತ್ತು. ಹೀಗೆ ಮಾತಾಡುತ್ತ ನಡುವೆ ಪ್ರಭಾಳ ಮಾತೂ ಬಂದು ಬಿಡುತ್ತಿತ್ತು. ''ನನಗೆ ಒಮ್ಮೊಮ್ಮೆ ಏನನ್ನಿಸ್ತದೆ ಗೊತ್ತಾ, ಯಾಕೆ ನಾವಿಬ್ಬರೂ ಪ್ರಭಾಳನ್ನು ಮದುವೆ ಆಗಬಾರದು ಅಂತ? ನೀನೇನು ಹೇಳ್ತೀಯ? ನೋಡು ನಮ್ಮಿಬ್ಬರಿಗೆ ಒಂದೇ ಅಪ್ಪ; ಇನ್ನು ಪ್ರಭಾಳನ್ನ ಮದುವೆ ಆದರೆ ಆಗ ನಮ್ಮಿಬ್ಬರಿಗೆ ಒಂದೇ ಹೆಂಡತಿ ಅಷ್ಟೇ. ಗಂಡಸು ಎರಡು ಮೂರು ಹೆಂಡತಿ ಇಟ್ಟುಕೋಬಹುದಾದರೆ ಹೆಂಗಸರೇಕೆ ಎರಡು ಗಂಡಂದಿರನ್ನ ಕಟ್ಟಿಕೋಬಾರ್ದು? ಪುರಾಣದ ದ್ರೌಪದಿಯ ಹಾಗೆ?" ಹಾಗಂತ ಬಾಪುಟ್ಟಿ ತರ್ಕಿಸುತ್ತಿದ್ದ. ಆದರೆ ಇದೂ ಕೂಡ ಕುಡಿದಾಗಷ್ಟೇ ತೋಚುವ ತರ್ಕವಾದ ಕಾರಣ ನಾನು ಹೆಚ್ಚು ಮಾತು ಬೆಳೆಸದೆ ಸುಮ್ಮನಾಗುತ್ತಿದ್ದೆ. ಬಾಪುಟ್ಟಿಗೆ ಇದ್ದದ್ದು ಒಂದೇ ಆಸೆ – ಅದು ಸ್ವಂತಕ್ಕೊಂದು ಮನೆ ಕಟ್ಟುವುದು ಮತ್ತು ಅಲ್ಲಿ ಪ್ರಭಾಳೊಂದಿಗೆ ಸಂಸಾರ ಮಾಡುವುದು. ಅದರಾಚೆಗೆ ಅವನು ಹೆಚ್ಚಿನದೇನನ್ನೂ ಯೋಚಿಸಿರಲಿಲ್ಲ. ಪ್ರಭಾಳನ್ನು ಕಣ್ಣ ಗೊಂಬೆಯಂತೆ ಜೋಪಾನವಾಗಿ ನೋಡಿಕೊಳ್ಳುವುದರ ಹೊರತು ಬೇರಿನ್ನೊಂದು ಜವಾಬ್ದಾರಿಯ ಕುರಿತು ಯೋಚನೆಯಿರಲಿಲ್ಲ. ಆದರೆ ನನಗೆ ಹಾಗಲ್ಲ. ನನಗೆ ಏನೆಲ್ಲ ಇತ್ತು – ಓದಬೇಕು, ಹೆಚ್ಚು ಓದಬೇಕು, ಸರ್ಕಾರಿ ನೌಕರಿ ಪಡೆಯಬೇಕು, ತಂಗಿಯನ್ನು ಮದುವೆ ಮಾಡಿಕೊಡಬೇಕು. ಅದೂ ಎಸ್ಟೇಟಿನಿಂದ ಹೊರಗೆ ಯಾರಾದರೂ ಗೌರ್ಮೆಂಟ್ ಕೆಲಸದವನಿಗೆ ಮಾಡಿಕೊಡಬೇಕು. ಆಮೇಲೆ ಅಪ್ಪನಾದಿಯಾಗಿ ಎಲ್ಲರೂ ಎಸ್ಟೇಟ್ ಬಿಟ್ಟು ಹೊರಗೆ ಬರಬೇಕು. ಇದು ಅಮ್ಮನ ಆಸೆ, ಅಮ್ಮನ ಕನಸು. ಅಮ್ಮ ನನ್ನಲ್ಲಿ ಕೇಳಿದ ಒಂದೇ ಒಂದು ಕೋರಿಕೆ. ಅಮ್ಮನೆಂದರೆ ನನಗೆ ಎಷ್ಟು ಪ್ರೀತಿಯಿತ್ತೆಂಬುವುದಕ್ಕೆ ಅಮ್ಮನ ಕನಸೇ ನನ್ನ ಜವಾಬ್ದಾರಿಯೆಂದುಕೊಂಡು ನಾನು ದಿನೇ ದಿನೇ ದೃಢಪಡಿಸಿಕೊಂಡಿದ್ದೇ ಸಾಕ್ಷಿ. ಹಾಗಾಗಿ ನಾನು ಬಾಪುಟ್ಟಿಯೊಂದಿಗೆ ಎಷ್ಟೇ ಸುತ್ತಿದರೂ ಕಡೆಗೆ ದಮ್ಮುಕಟ್ಟಿಕೊಂಡು ಅಂದಂದಿನ ಅಭ್ಯಾಸ ಮಾಡಿಯೇ ತೀರುತ್ತಿದ್ದೆ. ಮತ್ತು ಹತ್ತನೆಯ ತರಗತಿಯಲ್ಲಿ ಒಳ್ಳೆಯ ಮಾರ್ಕ್ಸ್ ಬಂದಾಗ ಮುಂದಿನ ಓದಿಗೆ ಪೇಟೆಗೆ ಹೋಗಿ ಹಾಸ್ಟೆಲ್ ಸೇರುವ ಚಿಂತೆಯೊಂದನ್ನೇ ಎದೆಯಲ್ಲಿಟ್ಟುಕೊಂಡು ಒಂದೊಂದು ದಿನವನ್ನೂ ಭಾರದಿಂದ ಕಳೆದು ಕಡೆಗೂ ಹಾಸ್ಟೆಲ್ ಸೇರಲು ನಿರ್ಧರಿಸಿದ್ದೆ. ಇದಕ್ಕೆಲ್ಲ ಬಾಪುಟ್ಟಿಯೇ ಕಾರಣಕರ್ತನಾಗಿದ್ದ. ನನಗೆ ಹಾಸ್ಟೆಲ್ ನೋಡಿದ್ದು ಮತ್ತು ಅಪ್ಪನ ಜೊತೆ ಕಾಲೇಜಿಗೆ ಸೇರಿಸಲು ಬಂದದ್ದು ಕೊನೆಗೆ ಹಾಸ್ಟೆಲ್ ಸೇರುತ್ತೇನೆಂದು ನನಗಾಗಿ ಮತ್ತಷ್ಟು ಹೊಸ ಬಟ್ಟೆ, ಟ್ರಂಕು ತಂದು ಉಮ್ಮನದೇ ಸೀರೆ ಕೆಳಗೆ ಹಾಸಿ ಅದರಲ್ಲಿ ಎಲ್ಲ ಜೋಡಿಸಿಕೊಟ್ಟದ್ದು, ಪುಸ್ತಕ ಕೊಳ್ಳಲು ಹಣ ಕೊಟ್ಟದ್ದು ಎಲ್ಲ ಬಾಪುಟ್ಟಿಯೇ ಆಗಿದ್ದ. ಅವನ ಈ ಚಟುವಟಿಕೆ ನೋಡಿ, ಅಮ್ಮನಿಗೂ ಒಳಗೊಳಗೇ ತುಂಬ ಮೆಚ್ಚಿಕೆಯಾಗಿ, ಅವನನ್ನು ನೇರ ಮಾತಾಡಿಸಲು ಅಭಿಮಾನ ಅಡ್ಡ ಬಂದು, ನನ್ನ ಕೈಯಲ್ಲಿ ಅಷ್ಟು ಹಣವಿಟ್ಟು, "ಎಲ್ಲ ತಲೆಗೆ ಹಾಕಿಕೊಂಡು ಕಷ್ಟ ಪಡ್ತಾ ಇದಾನೆ. ಇಕೋ ಕಾಸು. ಎಲ್ಲದಕ್ಕೂ ಅವನ ಕೈ ನೋಡಬೇಡ" ಅಂದಿದ್ದಳು. ಇನ್ನು ಬಾಪುಟ್ಟಿಯ ಕಾರುಬಾರು ನೋಡಿ ಸ್ವತಃ ಅಪ್ಪನೇ ದಂಗಾಗಿ, ಏನೇ ಕೆಲಸ ಮಾಡುವ ಮುನ್ನ ಬಾಪುಟ್ಟಿಯ ಕಡೆಗೊಮ್ಮೆ ಒಪ್ಪಿಗೆಯೇ ಎಂಬಂತೆ ನೋಡಲು ಶುರು ಮಾಡಿದ್ದ. ಅಂಥ ಬಾಪುಟ್ಟಿ ಕಡೆಗೊಮ್ಮೆ ನಮ್ಮನ್ಯಾರನ್ನೂ ಕೇಳದೆ ಒಂದು